ತಾರೀಖು 2ನೆ ಡಿಸೆಂಬರ್ 1903.

ನಂ. 1092—ಜು., ಸ್ಯ 1890ನೆ ಇಸವಿಯ ಮೈಸೂರ ಆರಂಸ್ ರೆಗ್ಯುಲೇಷನಿನ 22ನೆ ಸೆಕ್ಷನ್ ಅನುಸರಿಸಿ, ಮೈಸೂರು ಜಿಯೋಲಾಜಿಕಲ್ ಇಲಾಖೆಯ ಅಪ್ರೆಂಟಿಸ್ ಭೂರಚನಾ ಶಾಸ್ತ್ರಜ್ಞರು ಮತ್ತು ಅವರ ಮೇಲ್ವಿಚಾರಣೆಯ ದರೋಬಸ್ತು ಆಫೀಸರುಗಳಿಗೆ, ಮೇಲ್ಕಂಡ ರೆಗ್ಯುಲೇಷನಿನ 8, 9, 10 ಮತ್ತು 11ನೆ ಸೆಕ್ಷನ್‌ಗಳಲ್ಲಿರುವ ಫಿರಂಗಿ, ಟಾರ್ಪಿಡೊ ಸರ್ವಿಸ್‌ಗೋಸ್ಕರ ಉದ್ದೇಶಿಸಿಲ್ಪಟ್ಟ ಸಾಮಾನುಗಳು, ಯುದ್ಧದ ಬಾಣಗಳು ಮತ್ತು ಆಯುಧಗಳು ಮತ್ತು ಮದ್ದು ತಯಾರು ಮಾಡುವ ಬಗ್ಗೆ ಬೇಕಾದ ಎಂತಸಾಹಿತ್ಯ ಇವುಗಳಿಗೆ ಸಂಬಂಧಪಟ್ಟದ್ದುವಿನಾ ಮಿಕ್ಕ ವಿಶಿಷ್ಟ ಆಟಂಕಗಳು ಮತ್ತು ಅಪ್ಪಣೆಗಳು ಚಲಾಯಿಸುವುದರಿಂದ ಮೈಸೂರು ಸೀಮೆಯಲ್ಲಿ ಶ್ರೀಮಂತ ಮಹಾರಾಜ್ಞಾ ಸರ್ಕಾರದವರು ಮನ್ನಾ ಮಾಡಿರುತ್ತಾರೆ.

ತಾರೀಖು 24ನೆ ನವಂಬರ್ 1903.

ನಂ. ರೆ. 1428, ಸ್ಯ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ತುಮಕೂರು ಡಿಸ್ಟ್ರಿಕ್ಟು ಕೊರಟಗೆರೆ ಸಬ್ ತಾಲ್ಲೂಕು ಕೊರಟಗೆರೆ ಹೋಬಳಿ ನವಿಲಕುಂಟೆ ಗ್ರಾಮದಲ್ಲಿ ಮನೆಗಳನ್ನು ಕಟ್ಟುವ ಬಗ್ಗೆ ಬೇಕಾಗಿರುತ್ತದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ಮತ್ತು 7ನೆ ಸೆಕ್ಷನ್‌ಗಳನುಸರಿಸಿ ತುಮಕೂರ ಡಿಸ್ಟ್ರಿಕ್ಟಿನ ಮೊದಲನೇ ಜನರಲ್ ಅಸಿಸ್ಟೆಂಟ್ ಕಮಿಷನರಾದ ಮೆ॥ ಸಿ. ಶೇಷಾದ್ರಯ್ಯಂಗಾರು) ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರ್ರ ಹೆಸರು.	ಸರ್ವೆ ನಂ.	ಜಮೀನಿನ ವಿಸ್ತೀರ್ಣ. ಜಮೀನಿನ ವಿಸ್ತೀರ್ಣ.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ.			
							ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.
ಕೊರಟಗೆರೆ ಸಬ್ ತಾಲ್ಲೂಕು	ಕೊರಟಗೆರೆ	ನವಿಲಕುಂಟೆ	ಸಾಮಾನ್ಯ	1	ಗುಂಟೆ. 37 ಎಕರೆ. 12 ಖುಷ್ಕಿ	ಗುಂಟೆ. 31 ಎಕರೆ. 4	ಲಂಜನೇಯಸ್ವಾಮಿ ದೇವಸ್ಥಾನಕ್ಕೆ ಸೇರಿದ ಸರ್ವೆ ನಂ. 2	ಸರ್ವೆ ನಂ. 26	ಸರ್ವೆ ನಂ. 13 ಮತ್ತು 29	ಸರ್ವೆ ನಂ. 11

ತಾರೀಖು 26ನೆ ನವಂಬರ್ 1903.

ನಂ. ರೆ. 1438, ಸ್ಯ 1903ನೆ ಆಗಸ್ಟ್ 31ನೆ ಮಾರ್ಕುಂ 742—ರೆ. ಫೈ. 30—98ನೆ ನಂಬರ್ ಇಸ್ತಿಹಾರ್ನಾ ಮೇಲಂತೆ ಚಿತ್ರದುರ್ಗ ಡಿಸ್ಟ್ರಿಕ್ಟಿನ ದಾವಣಗೆರೆಗೆ ನೇಮಿಸಲ್ಪಟ್ಟಿದ್ದ ಆಕ್ಟಿಂಗ್ ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರಾದ ಮೆ॥ ಬಿ. ರಾಮಸ್ವಾಮಯ್ಯನವರು ಕೋಲಾರ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ. ಕೂಡ್ಲೆ ಕೆಲಸಕ್ಕೆ ದಾಖಲಾಗತಕ್ಕದ್ದು.

ತಾರೀಖು 27ನೆ ನವ್ಹಂಬರ್ 1903.

ನಂ. ರೆ. 1482, ಜನರಲ್ ವ ರೆವಿನ್ಯೂ ಸೆಕ್ರಟೇರಿಯಟ್ಟಿನಲ್ಲಿ ಕೆಲಸ ಮಾಡುತಲಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾದ ಮೆ॥ ನರಸಿಂಗರಾವ್ ಪೂರ್ಣಯ್ಯನವರು ಡಿಸ್ಟ್ರಿಕ್ಟ್ ಟ್ರೆಜರಿಯ ಚಾರ್ಜಿನಲ್ಲಿರಲಿಕ್ಕೆ ಹಂಗಾಮಿಯಾಗಿ ಬೆಂಗಳೂರ ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತಾರೆ.

ತಾರೀಖು 28ನೆ ನವಂಬರ್ 1903.

ನಂ. ರೆ. 1490, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ತುಮಕೂರ ಡಿಸ್ಟ್ರಿಕ್ಟು ತಿಪಟೂರು ತಾಲ್ಲೂಕಿನ ಅಮಲ್ದಾರ್ರಾದ ಮೆ॥ ಸಿ. ವಿ. ನಾರಾಯಣ ರಾಯರಿಗೆ 1903ನೆ ಜೂನ್ 2ನೆ ತಾರೀಖಿನಾರಭ್ಯ 6 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು. ತಾಲ್ಲೂಕು ಷಿರಸ್ತೇದಾರು) ಸದರಿ ಯವರು ರಜಾದಲ್ಲಿರುವ ಕಾಲದಲ್ಲಿ ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿದ್ದರು.

ತಾರೀಖು 28ನೇ ನವಂಬರ್ 1903.

ನಂ. ರೆ. 1493—ರೆ. ಫೈ. 26—1896-7, ಹೊಸಕೋಟೆ ತಾಲ್ಲೂಕಿನ ಅಮಲ್ದಾರ್ರಾದ ಮೆ॥ ಬಿ. ಕೇಶವಯ್ಯನವರಿಗೆ 1903ನೆ ಜೂನ್ 15ನೆ ಮಾರ್ಕುಂ ರೆ. 4588ನೆ ನಂಬರ್ ಇಸ್ತಿಹಾರ್ನಾ ಮೇಲಲ್ಲಿ ಕೊಟ್ಟಿದ್ದ 8 ದಿನಗಳ ಪ್ರಿವಿಲೇಜ್ ರಜಾ ರದ್ದು ಮಾಡಲ್ಪಟ್ಟಿರುತ್ತದೆ.

ತಾರೀಖು 26ನೆ ನವೆಂಬರ್ 1903.

ನಂ. ರೆ. 1443, ಸ|| 1894ನೆ ಇಸವಿಯ VIIನೆ ನಂಬರ ಲ್ಯಾಂಡ್ ಆಕ್ವಿಜೀಷನ್ ರೆಗ್ಯುಲೇಷನ್ 6ನೆ ಸೆಕ್ಷನಿನ ನಿಯಮಗಳನುಸರಿಸಿ ಇದರಲ್ಲಿ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ದಾವಣಗೆರೆ ತಾಲ್ಲೂಕಿನ ಮುದಹದ್ದಿದಿ ಗ್ರಾಮದಲ್ಲಿ ಕಣಗಳನ್ನು ಹಾಕುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಜಿಲ್ಲಾ ಕಮೀಷನರವರು ಸದರಿ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರ ಹೆಸರು.	ಸರ್ವೆ ನಂ.	ತರಹ.	ವಿಸ್ತೀರ್ಣ.	ಆಕಾರ.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ.			
										ಉತ್ತರ.	ದಕ್ಷಿಣ.	ಪೂರ್ವ.	ಪಶ್ಚಿಮ.
							ಎ. ಗು.	ರೂ. ಆ. ಪೈ.					
ಚಿತ್ರದುರ್ಗ	ದಾವಣಗೆರೆ	ಹದಡಿ	ಮುದಹದಡಿ	1. ರುದ್ರಪ್ಪ ಬಿ ಕೆಂಚಪ್ಪ .. 2. ರುದ್ರಂಣ	1	ಖುಷ್ಕಿ	9 2	2 12 0	2 1	ಕಾಲಹಾದಿ	ಸರ್ವೆ ನಂ. 2	ಸರ್ವೆ ನಂ. 1ರ ಭಾಗ	ಗ್ರಾಮ
				1. ಹೊಳೆಯಪ್ಪ ... 2. ನೀಲಗ ..	2	ಡಿಟೋ	9 37	2 8 0	1 21	ಸರ್ವೆ ನಂ. 1	ಡಿಟೋ 3	ಡಿಟೋ 2ರ ಭಾಗ	ಡಿಟೋ
				1. ಪೂರಿ ಚಿಕ್ಕಣ್ಣ ... 2. ಕೆಂಚಪ್ಪ ಮತ್ತು ಕೋಂ ವೀರಭದ್ರಪ್ಪ.	3	ಡಿಟೋ	14 28	4 8 0	1 14	ಡಿಟೋ 2	ಡಿಟೋ 4	ಡಿಟೋ 3ರ ಭಾಗ	ಡಿಟೋ
				1. ರುದ್ರಂಣ ಬಿ ಕೆಂಚಪ್ಪ 2. ಅರೇರ ಭವ್ಯ ...	4	ಡಿಟೋ	14 32	4 0 0	1 18	ಡಿಟೋ 3	ಡಿಟೋ 5	ಡಿಟೋ 4ರ ಭಾಗ	ಡಿಟೋ
				1. ಪೂಜಾರಿ ಲಿಂಗ ...	5	ಡಿಟೋ	9 17	2 12 0	0 33	ಡಿಟೋ 4	ಡಿಟೋ 26 ಮತ್ತು 25	ಡಿಟೋ 5ರ ಭಾಗ	ಡಿಟೋ
									7 7				

ತಾರೀಖು 24ನೆ ನವಂಬರ್ 1903.

ನಂ. ರೆ. 1431, ಸ್ ಱ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಶ್ಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಹೊಳೆನರಸೀಪುರ ತಾಲ್ಲೂಕಿನಲ್ಲಿರುವ ಇದರಡೀ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಮಹಮದೀಯರ ಖಬರಸ್ಥಾನಗೋಸ್ಕರ ಬೇಕಾಗಿರುತ್ತವೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನ್‌ಗಳನುಸರಿಸಿ ಹಾಸನ ಡಿಸ್ಟ್ರಿಕ್ಟಿನ ಜನರಲ್ ಅಸಿಸ್ಟೆಂಟ್ ಕಮಿಷನರವರು ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ತಾಲ್ಲೂಕು.	ಹೋಬಳಿ.	ಗ್ರಾಮ.	ಮಾಲೀಕರ ಹೆಸರು.	ಸ್ವತ್ತಿನ ವಿವರ.	ವಿಸ್ತೀರ್ಣ.		ಆಕಾರ.	ಚಕ್ಕುಬಂದಿ.			
					ಎಕರೆ.	ಗುಂಟೆ.	ರೂ. ಆ. ಪೈ.	ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
ಹೊಳೆನರಸೀಪುರ	ಹೊಳೆನರಸೀಪುರ	ಹೊಳೆನರಸೀಪುರ	ಚಾಡಜೆಟ್ಟಿ ಬಿನ್ ಕೆಂಪಜೆಟ್ಟಿ	ಖುಷ್ಕಿ ಸರ್ವೆ ನಂ. 121ರ ಭಾಗ	...	32	1— 0—0	ಖುಷ್ಕಿ ಸರ್ವೆ ನಂ. 121ರ ಭಾಗ	ಹಾಸನ—ಅಲದಾಳ ರಸ್ತೆ	ಖುಷ್ಕಿ ಸರ್ವೆ ನಂ. 172, 173	ಸರ್ವೆ ನಂ. 121
	ಹೊಳೆಕೋಟೆ	ಕಡಬಿನಕೋಟೆ	ಪುಟ್ಟ ಬಿನ್ ಹಸಿಗೆಮಾರಿ ಹೊನ್ನ	ಖುಷ್ಕಿ ಸರ್ವೆ ನಂ. 90ರ ಭಾಗ	1	23	1—12—0	ಖುಷ್ಕಿ ಸರ್ವೆ ನಂ. 90	ಖುಷ್ಕಿ ಸರ್ವೆ ನಂ. 89ರ ಭಾಗ	ಖುಷ್ಕಿ ಸರ್ವೆ ನಂ. 89ರ ಭಾಗ	ಸರ್ವೆ ನಂ. 84ರ ಎಲ್ಲಿ ಗುತ್ತಿ ಸರ್ವೆ ನಂ. 121

ತಾರೀಖು 30ನೆ ನವಂಬರ್ 1903.

ನಂ. ರೆ. 1550, ಸ್ ಱ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಶ್ಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧ ಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಗಿರೋಲನ್ನು ಅಗಿಯುವ ಬಗ್ಯೆ ಬೇಕಾಗಿರುತ್ತದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನ್‌ಗಳನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಮೊದಲನೇ ಅಸಿಸ್ಟೆಂಟ್ ಕಮಿಷನರವರು ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ಸರ್ವೆ ನಂ.	ಜಮೀನಿನ ವಿಸ್ತೀರ್ಣ.	ಆಕಾರ.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ.			
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಶಿವಮೊಗ್ಗ	ಶಿವಮೊಗ್ಗ	ಬಂಕಿಪುರ	ಕೋಡಿಪಾಳ್ಯ	ಖಾದರ್ ನವಹಬೀಬ್‌ಸಾಬ್ ಉರಫ್ ಗೆನ ಲಾಂಬುನೇಕ್ ಸಾಬ್.	ಖುಷ್ಕಿ 36	ಎ. ಗುಂ. 3 12	ರೂ. ಆ. ಪೈ. 1 4 0	ಎ. ಗುಂ. 1 0	ಸರ್ವೆ ನಂ. 36	ತರೀಕೆರೆಗೆ ಹೋಗುವ ಸರ್ಕಾರ ರಸ್ತೆ	ಬೀರೂರು-ಶಿವಮೊಗ್ಗ ರೈಲ್ವೆ ಲೈನು ಮತ್ತು ಬಂಕೀಪುರ ಗ್ರಾಮದ ಎಲ್ಲಿ	ಸರ್ವೆ ನಂ. 37